### ಚುಕ್ಕಿ ಮೂಡ್ಯಾವು...

ದಶಕಗಳ ಕಾಲ ಭಾರತೀಯ ಚೆಸ್‌ನ ಬೆಳ್ಳಿಚುಕ್ಕಿಯಂತೆ ವಿಶ್ವನಾಥನ್ ಆನಂದ್ ಕಂಗೊಳಿಸಿದ್ದರಲ್ಲ; ಅವರ ಸ್ಥಾನಕ್ಕೆ ಯಾರು ಎನ್ನುವ ಪ್ರಶ್ನೆಗೆ ಸಂಭಾವ್ಯ ಉತ್ತರಗಳಲ್ಲೊಂದು ಪ್ರಜ್ಞಾನಂದ. ಚೆಸ್‌ರಸಿಕರ ಆನಂದಕ್ಕೆ ಕಾರಣರಾದ ಇಬ್ಬರೂ 'ಆನಂದ'ರು ತಮಿಳುನಾಡಿನವರು.

2707 ರೇಟಿಂಗ್ ಹೊಂದಿರುವ ಪ್ರಜ್ಞಾನಂದ ಮಾತ್ರವಲ್ಲ; ವಿಶಿ ಆನಂದ್‌ರ ಜಾಗದಲ್ಲಿ ನಿಲ್ಲಲು ಹಂಬಲಿಸುವ ಜಾಣರು ಮತ್ತೂ ಇದ್ದಾರೆ. ಭಾರತದ ಚೆಸ್ ಜಗತ್ತೀಗ ಸಂಕ್ರಮಣ ಸ್ಥಿತಿಯಲ್ಲಿದೆ. 2007ರಿಂದೀಚೆಗೆ ರೂಪುಗೊಂಡಿರುವ 20 ಚಾಂಪಿಯನ್‌ಗಳು ಸೇರಿದಂತೆ ಒಟ್ಟು 82 ಗ್ರ್ಯಾಂಡ್ ಮಾಸ್ಟರ್‌ಗಳು ಭಾರತದ ಚದುರಂಗದ ಕಣದಲ್ಲಿದ್ದಾರೆ. ನಿಹಾಲ್ ಸರಿನ್ (2684), ಅರ್ಜುನ್ ಎರಿಗೇಶಿ (2704) ಹಾಗೂ ಆನಂದ್‌ರಿಂದ ಭರವಸೆಯ ಆಟಗಾರ ಎಂದು ಕರೆಸಿಕೊಂಡಿರುವ ದೊಮ್ಮರಾಜು ಗುಕೇಶ್ ಸೇರಿದಂತೆ ಇಪ್ಪತ್ತನ್ನು ದಾಟದ ಯುವ ಆಟಗಾರರು ಚೆಸ್ ಅಂಗಳದಲ್ಲಿ ಬೆಳದಿಂಗಳು ಮೂಡಿಸಿದ್ದಾರೆ. ಫಿಡೆ ವಿಶ್ವಕಪ್‌ನಲ್ಲಿ ಎಂಟರ ಘಟ್ಟ ತಲುಪಿದ ವಿದಿತ್ ಗುಜರಾತಿ ಮತ್ತೊಬ್ಬ ಪ್ರತಿಭಾವಂತ ಚೆಸ್ಸಿಗ. ಈ ಸಾಲಿನಲ್ಲೀಗ ಪ್ರಗ್ ಎನ್ನುವುದೊಂದು ಬೆಳ್ಳಿಚುಕ್ಕಿ.

**ಚೆಸ್ ಚರಿತ್ರೆಯಲ್ಲಿ ಪ್ರಜ್ಞಾನಂದ ಅತ್ಯಂತ ಕಿರಿಯ 'ಇಂಟರ್‌ನ್ಯಾಷನಲ್ ಮಾಸ್ಟರ್'. ಗ್ರ್ಯಾಂಡ್ ಮಾಸ್ಟರ್ ಪದವಿಗೆ ಮೊದಲು ನೀಡಲಾಗುವ 'ಇಂಟರ್‌ನ್ಯಾಷನಲ್' ಪಟ್ಟಕ್ಕಾಗಿ 2400ರ ಫಿಡೆ ರೇಟಿಂಗ್ ದಾಟುವುದು ಅಗತ್ಯ.**

ಪ್ರಜ್ಞಾನಂದ ಸಾಧನೆಯ ಬಗ್ಗೆ ಮಾತನಾಡುವಾಗ ಅವನ ಜೊತೆಗಾರರ ಸಾಧನೆಯನ್ನು ಮರೆಯುವಂತಿಲ್ಲ. ಪ್ರಗ್ಗುವಿನ ಜೊತೆಗೇ, 2023ರ ಫಿಡೆ ವಿಶ್ವಕಪ್‌ನ ಎಂಟರ ಘಟ್ಟಕ್ಕೆ ಗುಕೇಶ್ (2755.9), ಅರ್ಜುನ್ ಎರಿಗೇಶಿ ಹಾಗೂ ವಿದಿತ್ ಗುಜರಾತಿ (2723) ತಲುಪಿದ್ದರು. ಅದರಲ್ಲೂ ದೊಮ್ಮರಾಜು ಗುಕೇಶ್ ಸಾಧನೆ ಕಣ್ಣು ಕೋರೈಸುವಂತಹದ್ದು. ಭಾರತದ ಅತಿ ಕಿರಿಯ ಮತ್ತು ವಿಶ್ವದ ಮೂರನೇ ಅತಿ ಕಿರಿಯ ಗ್ರ್ಯಾಂಡ್‌ಮಾಸ್ಟರ್ (ಜಿಎಂ) ಎಂಬ ಶ್ರೇಯಸ್ಸು 17 ವರ್ಷದ ಗುಕೇಶ್ (ಜನನ: ಮೇ 29, 2006) ಅವರದ್ದು. 2019ರ ಮಾರ್ಚ್‌ನಲ್ಲಿ ಜಿಎಂ ಪದವಿ ಪಡೆದಾಗ ಗುಕೇಶ್ ವಯಸ್ಸು 12 ವರ್ಷ, 7 ತಿಂಗಳು, 17 ದಿನ. 'ಜಿಎಂ' ಆದಾಗ ಪ್ರಗ್ಗುವಿನ ವಯಸ್ಸು 12 ವರ್ಷ, 10 ತಿಂಗಳು 12 ದಿನ. ರಾಷ್ಟ್ರೀಯ, ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಹಲವು ಪ್ರಶಸ್ತಿಗಳನ್ನು ಗೆದ್ದುಕೊಂಡಿರುವ ಗುಕೇಶ್ 2023ರ ಏಪ್ರಿಲ್–ಮೇ ತಿಂಗಳಲ್ಲೇ ಬೆನ್ನುಬೆನ್ನಿಗೆ ಮೂರು ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಸ್ಪೇನ್‌ನಲ್ಲಿ ನಡೆದ 'ಚೆಸೇಬಲ್ ಸನ್‌ವೇ ಫಾರ್ಮೆಂಟೇರಾ ಓಪನ್', 'ಲಾ ರೋಡಾ' ಮತ್ತು 'ಮೆನೋರ್ಕಾ ಓಪನ್'ನಲ್ಲಿ ಚಾಂಪಿಯನ್ ಆದ ಹಿರಿಮೆ ಅವರದು. ಫಿಡೆ ವಿಶ್ವಕಪ್ ಪಂದ್ಯಾವಳಿ ಸಮಯದಲ್ಲೇ ಲೈವ್ ರೇಟಿಂಗ್‌ನಲ್ಲಿ ವಿಶ್ವನಾಥನ್ ಆನಂದ್‌ರನ್ನು ಹಿಂದಿಕ್ಕಿ, ಭಾರತದ ಅಗ್ರಮಾನ್ಯ ಆಟಗಾರ ಎನ್ನುವ ಕೀರ್ತಿಯನ್ನು ತಮ್ಮದಾಗಿಸಿಕೊಂಡರು. 1986ರ ಜುಲೈನಲ್ಲಿ ಭಾರತದ ಅಗ್ರಮಾನ್ಯ ಆಟಗಾರ ಎನ್ನಿಸಿಕೊಂಡ ಆನಂದ್, ಮೂವತ್ತೇಳು ವರ್ಷಗಳ ಕಾಲ ದೇಶದ ನಂಬರ್ 1 ಆಟಗಾರ ಎನ್ನಿಸಿಕೊಂಡಿದ್ದವರು. 2016ರ ಮಾರ್ಚ್‌ನಲ್ಲಿ ಕೆಲವೇ ದಿನಗಳ ಕಾಲ ಪಿ. ಹರಿಕೃಷ್ಣ ಮೇಲುಗೈ ಸಾಧಿಸಿದ್ದನ್ನು ಬಿಟ್ಟರೆ ಆನಂದ್‌ರ ಆಧಿಪತ್ಯಕ್ಕೆ ಧಕ್ಕೆ ಒದಗಿದ್ದೇ ಇಲ್ಲ. ಈಗ ಆನಂದ್ ಜಾಗಕ್ಕೆ ಗುಕೇಶ್ ಬಂದಿದ್ದಾರೆ. ಅವರ ಬೆನ್ನ ಹಿಂದೆಯೇ ಗೆಳೆಯರೂ ಇದ್ದಾರೆ.

ಗುಕೇಶ್, ಪ್ರಜ್ಞಾನಂದನ ಓರಗೆಯವನೇ ಆದ ನಾಗಪುರದ ರೌನಕ್ ಸಾಧ್ವಾನಿ (ಜನನ: ಡಿ. 22, 2005), ಭಾರತದ ಸಮಕಾಲೀನ ಚೆಸ್‌ನ ಪ್ರತಿಭಾವಂತರ ಸಾಲಿನಲ್ಲಿ ಮಿಂಚುತ್ತಿರುವ ಪ್ರತಿಭಾಶಾಲಿ. ವಿಶ್ವದ ಅತ್ಯಂತ ಚುರುಕಿನ ಆಟಗಾರರಲ್ಲಿ ಒಬ್ಬನೆಂದು ಪ್ರಸಿದ್ಧಿ ಪಡೆದಿರುವ ರೌನಕ್, ದೆಹಲಿಯ ಕಾಮನ್ವೆಲ್ತ್ ಟೂರ್ನಿಯಲ್ಲಿ




ಪ್ರಗ್ಗು ಗೆಲುವಿಗೆ ಚೆನ್ನೈನ ವೇಲಮ್ಮಾಳ್ ಶಾಲೆಯ ವಿದ್ಯಾರ್ಥಿಗಳ ಸಂಭ್ರಮ.